# ಹಣವಂತನಾಗುವ ಆಸೆ

ಮಹಾತ್ಮಗಾಂಧಿಯವರು ಇಂಗ್ಲೆಂಡಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಕಂಡುಕೊಂಡ ಸತ್ಯವೊಂದರ ಬಗ್ಗೆ ಆತಂಕದಿಂದ ಬರೆಯುತ್ತಾರೆ. ಕೈಗಾರೀಕರಣದ ಫಲವಾಗಿ ಲಂಡನ್ ಮುಂತಾದ ನಗರಗಳಲ್ಲಿ ಮಧ್ಯಮ ಗಾತ್ರದ– ಬೃಹತ್ ಗಾತ್ರದ ಉದ್ಯಮಗಳು ಸ್ಥಾಪನೆಗೊಂಡವು. ಅವುಗಳ ಜೊತೆಗೆ ಪೂರಕ ವಾಣಿಜ್ಯ ಸಂಸ್ಥೆಗಳು ತಲೆ ಎತ್ತಿದ್ದವು. ಅವು ದಿಢೀರ್ ಹಣ ತರುವ ಉದ್ಯೋಗಗಳನ್ನು ಸೃಷ್ಟಿಸಿದವು. ಇವುಗಳಿಂದ ಆಕರ್ಷಿತರಾದ ಇಂಗ್ಲೆಂಡಿನ ಗ್ರಾಮವಾಸಿ ಜನರು ತಮ್ಮ ಜಮೀನುಗಳನ್ನು ಮಾರಿ ಅಥವಾ ಪಾಳುಬಿಟ್ಟು ನಗರಗಳಿಗೆ ವಲಸೆ ಬರಲಾರಂಭಿಸಿದರು. ಬೇಸಾಯವನ್ನು ವಂಶಪಾರಂಪರ್ಯವಾಗಿ ಮಾಡಿಕೊಂಡು ಕೈಗೆ ಬಾಯಿಗಷ್ಟೇ ಸೀಮಿತವಾಗಿದ್ದ ಅವರ ಆರ್ಥಿಕ ಬದುಕಿಗೆ ತಿಂಗಳು ತಿಂಗಳು ಬರುವ ಹೊಸ ದುಡಿಮೆಯ ಸಂಬಳ ಅತ್ಯಂತ ಮೋಹಕವಾಗಿ ಕಂಡಿತು. ಅದರ ಪರಿಣಾಮ ಮಾತ್ರ ಭೀಕರವಾಗುತ್ತದೆಯೆಂದು ಅವರು ಊಹಿಸಿರಲಿಲ್ಲ. ವಿಶಾಲವಾದ ಪ್ರಕೃತಿ ಮಡಿಲಲ್ಲಿ, ಗಾಳಿ ಬೆಳಕಿನ ಆರೋಗ್ಯಕರ ವಾತಾವರಣದಲ್ಲಿ ಜೀವಿಸುತ್ತಿದ್ದ ಅವರು ನಾಲ್ಕು ಗೋಡೆಯ ನಡುವಿನ ಉಸಿರು ಕಟ್ಟಿಸುವ ದುಡಿಮೆಯ ಬಂಧನಕ್ಕೆ ಸಿಲುಕಿದರು. ಹೊಸ ಹೊಸ ಸ್ಲಮ್ಮುಗಳು ಸೃಷ್ಟಿಯಾದವು. ಜೊತೆಗೆ ಅವರು ಕೇಳರಿಯದ ರೋಗಗಳಿಂದ ನರಳಿದರು. ಅದಕ್ಕೆ ಸಮಾನಾಂತರವಾಗಿ ಗ್ರಾಮೀಣ ಬದುಕು ಎರಡನೆಯ ದರ್ಜೆಯ ಬದುಕೆಂಬ ಭಾವನೆ ಬೆಳೆಯತೊಡಗಿತು. ಎಲ್ಲರಲ್ಲೂ ನಗರಮುಖೀ ದೃಷ್ಟಿ ಬೆಳೆಯಿತು. ಗ್ರಾಮೀಣ ಉತ್ಪನ್ನಗಳ ಕಡೆ ಆಸಕ್ತಿ ಕಡಿಮೆಯಾಗಿ ಇಳುವರಿ ಕುಂದ ತೊಡಗಿತು.

ಈ ಪಲ್ಲಟ ಸ್ಥಿತಿಯನ್ನು ಕಂಡ ಗಾಂಧೀಜಿಯವರು ಇದು ಆರೋಗ್ಯಕರ ಬೆಳವಣಿಗೆಯಲ್ಲವೆಂದು ವಿಷಾದಿಸುತ್ತಾರೆ. ಇದು ಪ್ರತಿಯೊಬ್ಬರ ಎದೆಯಲ್ಲಿ ಮೂಡುವ ಹಣವಂತನಾಗಬೇಕೆಂಬ ಆಸೆಯ ಫಲವೆಂದು ಅವರು ಬಗೆಯುತ್ತಾರೆ. ಅದು ವ್ಯಕ್ತಿಯಲ್ಲಿ ಅನೇಕ ಪ್ರಲೋಭನೆಗಳನ್ನು ಉಂಟುಮಾಡುತ್ತದೆ. ಅಸಹಜ ಕೃತಕ ವಾತಾವರಣದಲ್ಲಿ ಸಿಲುಕುವಂತೆ ಮಾಡುತ್ತದೆ. ಹಣ ನಮಗೆ ಮಿತಿಯೊಳಗೆ ಬೇಕು. ದಿನ ನಿತ್ಯದ ಕನಿಷ್ಠ ಅಗತ್ಯಗಳನ್ನು ತುಂಬಿ ಕೊಡುವಷ್ಟರ ಮಟ್ಟಿಗೆ ಅದಿರಬೇಕು. ಅದು ಅತಿಯಾಗಿ ಸಂಗ್ರಹಿತವಾದರೆ ವ್ಯಕ್ತಿಯನ್ನು ಭೋಗಮೂಲ ವೃತ್ತದಲ್ಲಿ ಬಂಧಿಸಿ, ಸ್ವಾರ್ಥಿಯನ್ನಾಗಿಸುತ್ತದೆ. ಅವನು ಅದನ್ನೇ ಬಂಡವಾಳವನ್ನಾಗಿ ಮಾಡಿಕೊಂಡು ಶೋಷಣೆ ಮಾಡಲು ಉದ್ಯುಕ್ತನಾಗುತ್ತಾನೆ. ಇದರಿಂದ ಸಾಮಾಜಿಕ ಅಸಮಾನತೆ ಸೃಷ್ಟಿಯಾಗುತ್ತದೆ. ನಗರ–ಗ್ರಾಮ ಮತ್ತು ಬಡವ–ಬಲ್ಲಿದ ಎಂಬ ವರ್ಗಗಳು ಉಂಟಾಗಿ ಈ ವರ್ಗಗಳಲ್ಲಿ ದ್ವೇಷ ಮತ್ಸರ ಮುಂತಾದ ಅಮಾನವೀಯ ವರ್ತನೆಗಳು ಬೆಳೆಯುತ್ತವೆ. ಇದರಿಂದ ಸಾಮಾಜಿಕ ಸ್ವಾಸ್ಥ್ಯ ಕೆಡುತ್ತದೆ. ಈ ಎಲ್ಲ ಅಸಮಾಜಿಕ ಸಮಸ್ಯೆಗಳು ಹಣ ಮಾಡುವ ಆಸೆಯಿಂದಲೇ ಮೂಡಿದಂಥವು.

ಸುಮಾರು ಮುಕ್ಕಾಲು ಶತಮಾನದ ಹಿಂದೆಯೇ ಗಾಂಧೀಜಿಯವರು ಇಂಗ್ಲೆಂಡಿನಲ್ಲಿ ಗ್ರಹಿಸಿ ಅರ್ಥ ಮಾಡಿಕೊಂಡ ಸ್ಥಿತಿಯು ಇಂದು ಭಾರತದಲ್ಲಿ ಗೋಚರಿಸುತ್ತಿದೆ. ನಗರ ಜೀವನದ ಆಕರ್ಷಣೆಗೆ ಒಳಗಾಗಿರುವ ಗ್ರಾಮ ಬದುಕು ಇಂದು ಅತ್ಯಂತ ಅತಂತ್ರಸ್ಥಿತಿಯಲ್ಲಿದೆ. ಅಲ್ಲಿ ಕೃಷಿ ಕಾರ್ಮಿಕನಿಲ್ಲ; ದುಡಿಯುವ ಯುವಕರಿಲ್ಲ ಅಥವಾ ಇಂಗ್ಲೆಂಡಿನಲ್ಲಾದಂತೆ ಇಲ್ಲಿ ಕೃಷಿ ಯಂತ್ರೀಕರಣಕ್ಕೊಳಗಾಗಿಲ್ಲ. ಗ್ರಾಮಗಳ ಬಹುಪಾಲು ಯುವಕರು ನಗರಗಳಲ್ಲಿ ಕೆಲಸ ಹುಡುಕಿ ವಲಸೆ ಹೋಗಿದ್ದಾರೆ. ಬೆಂಗಳೂರಿನಂಥ ಬೃಹತ್ ನಗರಗಳ ಗಾರ್ಮೆಂಟ್, ಅಂಗಡಿಗಳಲ್ಲಿ; ಹೋಟೆಲ್ ಇನ್ನಿತರ ಸಣ್ಣ ಸಣ್ಣ ಉದ್ಯಮಗಳಲ್ಲಿ ಅತ್ಯಂತ ಕಡಿಮೆ ಸಂಬಳಕ್ಕೆ ದುಡಿಯುತ್ತಿದ್ದಾರೆ. ಅವರೆಲ್ಲರ ಕಣ್ಣುಗಳಲ್ಲಿ ಇಂದಲ್ಲ ನಾಳೆ ಹಣವಂತನಾಗಬಹುದು, ಅಂಬಾನಿಯೋ ನಾರಾಯಣಮೂರ್ತಿ ಮತ್ಯಾರೋ ಶ್ರೀಮಂತನಂತಾಗಬಹುದು ಎಂಬ ಕನಸುಗಳು ಸುಳಿದಾಡುತ್ತಿರುತ್ತವೆ. ಅವೆಲ್ಲಾ ಮರೀಚಿಕೆ, ಭ್ರಮೆ ಎಂದು ತಿಳಿಯುವಷ್ಟರೊಳಗೆ ವಯಸ್ಸು ಮುಗಿಯುತ್ತಾ ಬಂದಿರುತ್ತದೆ; ಮುಪ್ಪು ದೇಹದ ಅಂಗಾಂಗಗಳನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡು ಅಸಹಾಯಕಗೊಳಿಸಿರುತ್ತದೆ. 'ಇರುವುದೆಲ್ಲವ ಬಿಟ್ಟು ಇರದುದರ ಕಡೆಗೆ ತುಡಿವುದೇ ಜೀವನ'ವೆಂಬ ಕವಿವಾಣಿ ಇಲ್ಲಿ ನಿಟ್ಟುಸಿರಿಗೆ ಕಾರಣವಾಗುತ್ತದೆ. ಮತ್ತೆ ಗ್ರಾಮಕ್ಕೆ ಬಂದು ದುಡಿಯಲಾಗದ, ನಗರದಲ್ಲಿ ಬದುಕಲಾರದ ಎಡಬಿಡಂಗಿ ಸ್ಥಿತಿಯಲ್ಲಿ ನರಳುವಂಥ ನೆಲೆಗೆ ಬದುಕು ಬಂದು ನಿಂತುಬಿಡುತ್ತದೆ.

ಹಣವಂತನಾಗಬೇಕೆಂಬ ಆಸೆ ಸಂಪೂರ್ಣ ನಿರಾಕರಣ ಸಂಗತಿಯಲ್ಲ. ಆದರೆ ಜೀವನದಲ್ಲಿ ಹಣದ ಸ್ಥಾನ ಎಷ್ಟಿರಬೇಕೆಂಬುದನ್ನು ನಮ್ಮ ವಿವೇಕ ನಿಶ್ಚಯಿಸಿಕೊಳ್ಳಬೇಕು. ಆ ಆಸೆ ಇತರರ ಬದುಕನ್ನು ದರೋಡೆ ಮಾಡುವ ಕ್ರಿಯೆಯಾಗಬಾರದು. ಅದಕ್ಕಾಗಿಯೇ ಗಾಂಧೀಜಿಯವರು ಜೀವನದಲ್ಲಿ ಸರಳತೆಯ ಮಹತ್ವವನ್ನು ಸಾರಿದರು. ತಾವೇ ಸ್ವತಃ ಸರಳವಾಗಿ ಬದುಕಿ ತೋರಿದರು. ಸರಳವಾದ ಬದುಕು ತೃಪ್ತಿಯನ್ನು, ಸ್ವಾವಲಂಬನೆಯ ಬದುಕು ಆತ್ಮಾಭಿಮಾನವನ್ನು ತಂದುಕೊಡುತ್ತದೆ ಎಂದು ದೃಷ್ಟಾಂತವಾಗಿ ಬದುಕಿ ಬಾಳಿದರು. ಹಣವಂತನಾಗಬೇಕೆಂಬ ಆಸೆ ನಮ್ಮ ಎದೆಯಲ್ಲಿ ಸಂಚಾರಿ ಭಾವವಾಗಿ ಝಳಪಿಸಿದಾಗ ಬುದ್ಧ, ಗಾಂಧಿ ಕಣ್ಮುಂದೆ ರೂಪುಗೊಳ್ಳಬೇಕು.

■ ಶಿಕಾಕು

---

# ಮಾತೇ ಮುತ್ತು

★ ಜಾತಿ ವಿನಾಶ ನಮ್ಮ ಉದ್ದೇಶವೇ ಅಲ್ಲ. ಅದರಿಂದ ವಿವಿಧ ಸಂಸ್ಕೃತಿಗಳು ನಾಶವಾಗುವುದರ ಜತೆಗೆ ನಾಡಿನ ಸಾಂಸ್ಕೃತಿಕ ವೈವಿಧ್ಯ ಮಾಯವಾಗುತ್ತದೆ.

–ಪೇಜಾವರ ವಿಶ್ವೇಶ ತೀರ್ಥ ಸ್ವಾಮೀಜಿ

★ ಸಮಾಜದಲ್ಲಿ ಜಾತಿ– ಜಾತಿಗಳ ನಡುವೆ ಸಮಾನತೆ ಮೂಡಿದರೆ ಮತಾಂತರ ಬೇಡ ಎನ್ನಬಹುದು. ಹುಟ್ಟಿದ ಧರ್ಮದಲ್ಲಿ ಸ್ವಾಭಿಮಾನಕ್ಕೆ ದಕ್ಕೆಯಾದಾಗಲೇ ಸ್ವಲ್ಪಮಟ್ಟಿಗೆ ಮತಾಂತರ ಆಗುತ್ತಿರುತ್ತದೆ.

–ಮಾದಾರ ಚನ್ನಯ್ಯ ಸ್ವಾಮೀಜಿ

★ ಸೋಮಾರಿಗಳಿಗೆ ಮಾತ್ರ ತಮ್ಮ ಭವಿಷ್ಯದಲ್ಲಿ ನಂಬಿಕೆ ಇರುವುದಿಲ್ಲ.

–ಹೆನ್ರಿ

★ ಸಿಟ್ಟು ಬಾರದವನು ಕಡುಮೂರ್ಖ; ಆದರೆ ಸಿಟ್ಟಿಗೇಳದವನು ಕಡುಜಾಣ.

–ಲೋಕೋಕ್ತಿ

★ ಹೆಚ್ಚಾಗಿ ಆಹಾರ ಸೇವಿಸಿದಾಗ ಜಠರದ ಭಾಗಕ್ಕೆ ಹೆಚ್ಚು ರಕ್ತ ಹರಿಯುತ್ತದೆ; ಮಿದುಳಿಗೆ ಹರಿಯುವ ರಕ್ತದ ಪ್ರಮಾಣ ಕಡಿಮೆಯಾಗುತ್ತದೆ. ಹೀಗಾಗಿ ಬುದ್ಧಿ ಮಂದವಾಗುವುದು ಮತ್ತು ಸೋಮಾರಿತನ ಹೆಚ್ಚುತ್ತದೆ.

–ಒಂದು ಸಂಶೋಧನೆ

★ ಬ್ರಹ್ಮಚಾರಿ ಸಂಪಾದಿಸುವುದಿಲ್ಲ; ವಾನಪ್ರಸ್ಥನೂ ಸಂಪಾದಿಸುವುದಿಲ್ಲ; ಅದರಂತೆ ಸನ್ಯಾಸಿಯೂ ಸಂಪಾದಿಸುವುದಿಲ್ಲ. ಹಾಗಾದರೆ ಇಡೀ ಸಮಾಜವನ್ನು ನಡೆಸುವವರು ಯಾರು? ಗೃಹಸ್ಥರು.

–ಮನುಸ್ಮೃತಿ

★ ಬುದ್ಧಿವಂತನೊಡನೆ ಯಾರು ಬೇಕಾದರೂ ಕೂಡಿ ಬಾಳಬಹುದು; ದಡ್ಡನೊಡನೆ ಕೂಡಿ ಬಾಳಬೇಕಾದರೆ ಬುದ್ಧಿವಂತಳೇ ಬೇಕು.

–ರಡ್‌ಯರ್ಡ್ ಕಿಪ್ಲಿಂಗ್

★ ಗೌರವ ನಾವು ತೋರಿಸಬೇಕಾದದ್ದು; ಪ್ರೀತಿ ನಾವು ಕೊಡುವಂತಹುದು.

–ಪಿ.ಟಿ.ಬೈಲಿ

★ ಆದರ್ಶ ಗಂಡ ಇರುವ ಯಾವ ಹೆಂಗಸಾದರೂ ಆದರ್ಶ ಹೆಂಡತಿಯೇ.

–ಬೂತ್ ಟಾರ್ಕಿಂಗ್ ಟನ್

★ ಒಳ್ಳೆಯ ಗಂಡ ಆಗುವುದು, ಒಳ್ಳೆಯ ಹೆಂಡತಿಯಿಂದ.

–ಜಾನ್ ಹೇವುಡ್

★ಹೆಂಡತಿ ತಪ್ಪು ಮಾಡಿದರೆ, ಗಂಡ ನಿರಪರಾಧಿ ಅಲ್ಲ.

–ಇಟಲಿ ಗಾದೆ

★ ಹೆಂಗಸಿಗೆ ಗಂಡನನ್ನು ಬಿಟ್ಟು ಬೇರೇನೂ ಬೇಡ; ಆದರೆ ಗಂಡ ದೊರೆತೊಡನೆ ಎಲ್ಲವೂ ಬೇಕು.

–ವಿಲಿಯಂ ಶೇಕ್ಸ್‌ಪಿಯರ್